Office of the Commissioner of Commercial Taxes, Bangalore-9.
27 JAN 2018
5226 D.C.C.T.
SL. No: (E-Governance)

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ: ವಾತೆಜಂಆ(ಆ)/ವಿಸ&ಸೇತೆಕ-6/
ಸಿಆರ್-8/14-15

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6,
ಕೆ.ಐ.ಎ.ಡಿ.ಬಿ.ಕಟ್ಟಡ, 'ಬಿ' ಬ್ಲಾಕ್, 3ನೇ ಮಹಡಿ, 4ನೇ ಫೇಸ್,
ಪೀಣ್ಯ 2ನೇ ಹಂತ, ಬೆಂಗಳೂರು, ದಿನಾಂಕ: 22-01-2018.

# ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ

ವಿಷಯ:- ಈ ವಿಭಾಗದಲ್ಲಿರುವ ನಿರುಪಯುಕ್ತ ವಾಹನಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ:- 1) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಪಶ್ಚಿಮ), ರಾಜಾಜಿನಗರ, ಬೆಂಗಳೂರು ಇವರ ಪತ್ರ ಸಂಖ್ಯೆ: ಉ.ಸಾ.ಅ&ಹಿ.ಪ್ರಾಸಾಅ.ಬೆಂ(ಪ)ಸಾ.ತರ/2015-16, ದಿನಾಂಕ: 26-02-2015, 04-05-2015 ಮತ್ತು 26-08-2015.

2) ಮಾನ್ಯ ವಾ.ತೆ. ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ಪತ್ರದ ಸಂಖ್ಯೆ:ವಿಹೆಚ್‌ಟಿ/ಸಿಆರ್-10/2015-16, ದಿನಾಂಕ: 19-06-2015, 29-06-2015 & 24-07-2015.

3) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಪಶ್ಚಿಮ), ರಾಜಾಜಿನಗರ, ಬೆಂಗಳೂರು ಇವರ ಪತ್ರ ದಿನಾಂಕ: 20-01-2018.

********

ಸಾರ್ವಜನಿಕ ಮಾಹಿತಿಗಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಉಲ್ಲೇಖ (2) ಮತ್ತು (3) ರ ಆದೇಶದಂತೆ ದಿನಾಂಕ: 06-02-2018 ರಂದು ಬೆಳಿಗ್ಗೆ 11.30 ಗಂಟೆಗೆ ಈ ಕಛೇರಿಯ ಈ ಕೆಳಕಂಡ ವಾಹನಗಳು ನಿರುಪಯುಕ್ತವಾಗಿರುವ ಕಾರಣ, ಸಂಬಂಧಿಸಿದ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿಸ&ಸೇತೆಕ-6, ಬೆಂಗಳೂರು, ಇವರಿಂದ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ವಿವರಗಳು ಈ ಕೆಳಕಂಡಂತಿರುತ್ತದೆ.

1. ಬಹಿರಂಗ ಹರಾಜು ದಿನಾಂಕ : 06-02-2018.

ಹರಾಜು ಮಾಡುವ ಸ್ಥಳ : ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6,
ಕೆ.ಐ.ಎ.ಡಿ.ಬಿ.ಕಟ್ಟಡ, 'ಬಿ' ಬ್ಲಾಕ್, 3ನೇ ಮಹಡಿ, 4ನೇ ಫೇಸ್,
ಪೀಣ್ಯ 2ನೇ ಹಂತ, ಬೆಂಗಳೂರು.

| ಕ್ರಮ ಸಂ. | ವಾಹನದ ಹೆಸರು | ವಾಹನದ ಸಂಖ್ಯೆ | ತಯಾರಿಕೆ ವರ್ಷ | ಇಂಧನ | ಹರಾಜು ಮಾಡಲು ನಿಗಧಿಪಡಿಸಿದ ಕನಿಷ್ಠ ಮರು ಮೌಲ್ಯ. |
|---|---|---|---|---|---|
| 01 | ಟಾ ಟಾ ಸುಮೋ | ಕೆಎ-02 ಜಿ 30 | 1999 | ಡಿಸೇಲ್ | ರೂ.40,000-00 |
| 02 | ಮಹೇಂದ್ರ&ಮಹೇಂದ್ರ ಜೀಪ್ | ಕೆಎ-01 ಜಿ 1323 | 1994 | ಡಿಸೇಲ್ | ರೂ.42,000-00 |

ನಿಬಂಧನೆಗಳು:

1) ಮೇಲೆ ತಿಳಿಸಿರುವ ನಿರುಪಯುಕ್ತ ವಾಹನಗಳನ್ನು ಸಾರ್ವಜನಿಕ ಬಹಿರಂಗ ಹರಾಜು ಮೂಲಕ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿಸ&ಸೇತೆಕ-6, ಬೆಂಗಳೂರು ಇವರ ಸಮ್ಮುಖದಲ್ಲಿ ಅಥವಾ ಅವರು ನೇಮಿಸಿದ ಅಧಿಕಾರಿಗಳ ಸಮ್ಮುಖದಲ್ಲಿ ನಡೆಸಲಾಗುವುದು.
2) ವಾಹನವನ್ನು ಎಲ್ಲಿ ಹೇಗಿದೆಯೋ ಹಾಗೆ ಬಹಿರಂಗ ಹರಾಜು ನಡೆಸಲಾಗುವುದು.
3) ಈ ಹರಾಜಿನಲ್ಲಿ ಪಾಲ್ಗೊಳ್ಳಬಯಸುವವರು ದಿನಾಂಕ: 03-02-2018 ರಂದು ಯಾವ ವಾಹನದ ಸಂಬಂಧ ಹರಾಜಿನಲ್ಲಿ ಪಾಲ್ಗೊಳ್ಳುವವರು ಸದರಿ ವಾಹನದ ಹರಾಜು ಮಾಡಲು ನಿಗಧಿಪಡಿಸಿದ ಕನಿಷ್ಠ ಮೌಲ್ಯದ ಶೇ.10 ರಷ್ಟು ಹಣವನ್ನು ಠೇವಣಿ ಮಾಡಿ ರಶೀತಿ ಪಡೆಯತಕ್ಕದ್ದು.
4) ವಾಹನವನ್ನು ಸಂಬಂಧಿಸಿದ ಅಧಿಕಾರಿಗಳಿಂದ ಅನುಮೋದನೆ ಸಿಕ್ಕ ನಂತರ 15 ದಿನಗಳೊಳಗಾಗಿ ಪೂರ್ತಿ ಹಣವನ್ನು ಪಾವತಿ ಮಾಡಿ ನಂತರ ಸ್ವಂತ ಖರ್ಚಿನಲ್ಲಿ ಯಥಾಸ್ಥಿತಿಯಲ್ಲಿ ಹಾಲಿ ಇರುವ ಜಾಗದಿಂದ ಸಾಗಿಸಿಕೊಳ್ಳತಕ್ಕದ್ದು.
5) ವಾಹನವನ್ನು ಪರೀಕ್ಷಿಸಲು ಇಚ್ಛಿಸುವವರು ಈ ಕಛೇರಿಯಲ್ಲಿ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 5-30 ಗಂಟೆಯೊಳಗೆ ಪರಿಶೀಲಿಸಬಹುದು.
6) ಹರಾಜಿನಲ್ಲಿ ಹಣ ಕಟ್ಟಿ ಯಶಸ್ವಿ ಆಗದವರಿಗೆ ಕಟ್ಟಿದ ಹಣವನ್ನು ಕೂಡಲೇ ಹಿಂತಿರುಗಿಸಲಾಗುವುದು.
7) ಬಹಿರಂಗ ಹರಾಜು ಮುಗಿದ ಮೇಲೆ ಅತೀ ಹೆಚ್ಚು ಬಿಡ್ಡುದಾರರು ಕೂಡಲೆ ಮಾರಾಟದ ಮೊತ್ತ ಹಾಗು ತೆರಿಗೆಗಳು ಸೇರಿದಂತೆ ಶೇಕಡ 25 ಭಾಗ ಹಣವನ್ನು ಪಾವತಿ ಮಾಡದೇ ಹೋದಲ್ಲಿ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
8) ಉಳಿದ ಶೇಕಡ 75 ಭಾಗ ಹರಾಜಿನ ಹಣವನ್ನು ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ) ಇವರಿಂದ ಒಪ್ಪಿಗೆ ಪತ್ರ ದೊರೆತ ದಿನಾಂಕದಿಂದ 15 ದಿನಗಳೊಳಗಾಗಿ ಪಾವತಿಸಿ ನಂತರ ತಮ್ಮ ಸ್ವಂತ ಖರ್ಚಿನಲ್ಲಿ ವಾಹನವನ್ನು ಹಾಲಿ ಇರುವ ಜಾಗದಿಂದ ಯಥಾ ಸ್ಥಿತಿಯಲ್ಲಿ ಸಾಗಿಸಿಕೊಳ್ಳತಕ್ಕದ್ದು.
9) ಹರಾಜಿನಲ್ಲಿ ವಿಲೇವಾರಿಯಾದ ವಾಹನವನ್ನು ನಿಗಧಿತ ಅವಧಿಯೊಳಗೆ ಪೂರ್ತಿ ಹಣ ಕಟ್ಟಿ ಸ್ವಾಧೀನಕ್ಕೆ ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ ಪ್ರತಿ ದಿನಕ್ಕೆ ರೂ. 50-00 ನೆಲಬಾಡಿಗೆ ವಿಧಿಸಲಾಗುವುದು ಮತ್ತು ತಿಂಗಳ ಒಳಗಾಗಿ ಪೂರ್ತಿ ಹಣ ಕಟ್ಟದಿದ್ದರೆ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಂಡು ವಾಹನವನ್ನು ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.
10) ಇಲಾಖಾ ಸಿಬ್ಬಂದಿಯವರು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ.
11) ಬಹಿರಂಗ ಹರಾಜಿನಲ್ಲಿ ವಾದ ವಿವಾದಗಳಿಗೆ ಅವಕಾಶವಿಲ್ಲ. ಯಾವುದೇ ತಕರಾರುಗಳಿಗೆ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿಸ&ಸೇತೆಕ-6, ಬೆಂಗಳೂರು, ಇವರ ತೀರ್ಮಾನವೇ ಅಂತಿಮವಾದುದು.
12) ಯಾವುದೇ ಸಂದರ್ಭದಲ್ಲಿಯೂ ಮಾರಾಟದ ಹರಾಜನ್ನು ಅಂಗೀಕರಿಸುವ, ತಿರಸ್ಕರಿಸುವ, ಮುಂದೂಡುವ, ರದ್ದುಪಡಿಸುವ ಎಲ್ಲಾ ಅಧಿಕಾರ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿಸ&ಸೇತೆಕ-6, ಬೆಂಗಳೂರು, ಇವರಿಗೆ ಸಂಬಂಧಪಟ್ಟಿರುತ್ತದೆ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6, ಬೆಂಗಳೂರು.

ಪ್ರತಿಗಳು:

1) ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಕೋರಮಂಗಲ, ಬೆಂಗಳೂರು-47 ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3) ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿಸ&ಸೇತೆಕ- 1, 2, 3, 4, 5, ಸದರಿ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
4) ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾಗೃತಿ), ಕೋರಮಂಗಲ, ಬೆಂಗಳೂರು ಸದರಿ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
5) ಇಲಾಖಾ ವೆಬ್‌ಸೈಟ್‌ನಲ್ಲಿ ಸದರಿ ಪತ್ರವನ್ನು ಹಾಕಲು, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಗಣಕ ಕೇಂದ್ರ, ಇವರಿಗೆ ಕಳುಹಿಸಲಾಗಿದೆ.
6) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಪಶ್ಚಿಮ), ರಾಜಾಜಿನಗರ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
7) ಸಾರ್ವಜನಿಕರ ಮಾಹಿತಿಗಾಗಿ ಸೂಚನಾ ಫಲಕಕ್ಕೆ.
8) ಕಛೇರಿ ಕಡತಕ್ಕೆ.